**ಶೇ. 8ರ ಉಳಿತಾಯ (ತೆರಿಗೆಗೆ ಒಳಪಡುವ) ಬಾಂಡುಗಳು, 2003 –ಅಧಿಸೂಚನೆ**
**ಭಾರತ ಸರ್ಕಾರ**
**ಹಣಕಾಸು ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ**
**ಆರ್ಥಿಕ ವ್ಯವಹಾರಗಳ ಇಲಾಖೆ.**

**ಅಧಿಸೂಚನೆ**

ನವದೆಹಲಿ, ದಿನಾಂಕ 21ನೇ ಮಾರ್ಚ್ 2003

**ಶೇ 8ರ ಉಳಿತಾಯ (ತೆರಿಗೆಗೆ ಒಳಪಡುವ)ಬಾಂಡುಗಳು, 2003**

ಸಂಖ್ಯೆ ಎಫ್ 4(10) ಡಬ್ಲ್ಯೂ ಮತ್ತು ಎಂ/2003: ಭಾರತ ಸರ್ಕಾರವು ಮುಂದಿನ ಸೂಚನೆಯ ತನಕ 21ನೇ ಏಪ್ರಿಲ್ 2003ರಿಂದ ಶೇ. 8 ರ ಉಳಿತಾಯ (ತೆರಿಗೆಗೆ ಒಳಪಡುವ)ಬಾಂಡುಗಳು, 2003ರ ("ಬಾಂಡುಗಳು") ನೀಡಿಕೆಯನ್ನು ಈ ಮೂಲಕ ಅಧಿಸೂಚಿಸುತ್ತದೆ. ಬಾಂಡುಗಳ ನೀಡಿಕೆಯ ನಿಬಂಧನೆಗಳೂ ಮತ್ತು ಷರತ್ತುಗಳು ಈ ಮುಂದಿನಂತಿರತಕ್ಕದ್ದು:

**2. ಹೂಡಿಕೆಗೆ ಅರ್ಹತೆ**

ಬಾಂಡುಗಳನ್ನು–

(i) ಅನಿವಾಸಿ ಭಾರತೀಯನಾಗಿರುವ ಒಬ್ಬ ವ್ಯಕ್ತಿ–

(ಎ) ತನ್ನ ವೈಯಕ್ತಿಕ ಸಾಮರ್ಥ್ಯದಲ್ಲಿ, ಅಥವಾ
(ಬಿ) ಜಂಟಿ ಆಧಾರದಲ್ಲಿ ವೈಯಕ್ತಿಕ ಸಾಮರ್ಥ್ಯದಲ್ಲಿ, ಅಥವಾ
(ಸಿ) ಯಾರೇ ಒಬ್ಬರು ಅಥವಾ ಜೀವಂತ ವಾರಸುದಾರ ಆಧಾರದಲ್ಲಿ ವೈಯಕ್ತಿಕ ಸಾಮರ್ಥ್ಯದಲ್ಲಿ ಅಥವಾ
(ಡಿ) ತಂದೆಯಾಗಿ/ತಾಯಿಯಾಗಿ/ಕಾನೂನು ಸಮ್ಮತ ಪೋಷಕನಾಗಿ ಅಪ್ರಾಪ್ತ ವಯಸ್ಕನ ಪರವಾಗಿ– ಹೊಂದಿರಬಹುದು.

(ii) ಹಿಂದು ಅವಿಭಾಜ್ಯ ಕುಟುಂಬವು ಹೊಂದಿರಬಹುದು.

(iii) (ಎ) "ಧರ್ಮಾದಾಯ ಸಂಸ್ಥೆ" ಅಂದರೆ ಭಾರತೀಯ ಕಂಪನಿಗಳ ಅಧಿನಿಯಮ, 1956ರ 25ನೇ ಪ್ರಕರಣದ ಅಡಿಯಲ್ಲಿ ನೋಂದಾಯಿಸಿರುವ ಒಂದು ಕಂಪನಿ ಅಥವಾ

(ಬಿ) ಜಾರಿಯಲ್ಲಿರುವ ಕಾನೂನಿನ ಅನುಸಾರವಾಗಿ ಧರ್ಮಾದಾಯ ಸಂಸ್ಥೆಯಾಗಿ ನೋಂದಣಿ ಪ್ರಮಾಣಪತ್ರ ಪಡೆದುಕೊಂಡಿರುವ ಒಂದು ಸಂಸ್ಥೆ.

(ಸಿ) ವರಮಾನ ತೆರಿಗೆ ಅಧಿನಿಯಮ, 1961ರ 80ಜಿ ಪ್ರಕರಣದ ಉದ್ದೇಶಗಳಿಗಾಗಿ ವರಮಾನ ತೆರಿಗೆ ಪ್ರಾಧಿಕಾರದಿಂದ ಪ್ರಮಾಣಪತ್ರವನ್ನು ಪಡೆದಿರುವ ಯಾವುದೇ ಸಂಸ್ಥೆ.

(iv) " ವಿಶ್ವವಿದ್ಯಾಲಯ" ಎಂದರೆ ಕೇಂದ್ರ, ರಾಜ್ಯ ಅಥವಾ ಪ್ರಾಂತ ಅಧಿನಿಯಮದ ಮೂಲಕ ಸ್ಥಾಪಿತವಾದ ಅಥವಾ ನಿಗಮಿತಗೊಂಡ ವಿಶ್ವವಿದ್ಯಾಲಯ ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗ ಅಧಿನಿಯಮ, 1956 (1956ರ 3) ರ 3ನೇ ಪ್ರಕರಣದ ಅಡಿಯಲ್ಲಿ ಆ ಅಧಿನಿಯಮದ ಉದ್ದೇಶಗಳಿಗಾಗಿ ವಿಶ್ವವಿದ್ಯಾಲಯವೆಂಬುದಾಗಿ ಘೋಷಿಸಿದ ಒಂದು ಸಂಸ್ಥೆಯೂ ಸೇರುತ್ತದೆ.

3. **ಹೂಡಿಕೆಯ ಮಿತಿ**

ಬಾಂಡುಗಳಲ್ಲಿ ಹಣ ಹೂಡುವುದಕ್ಕೆ ಯಾವುದೇ ಗರಿಷ್ಠ ಮಿತಿ ಇರುವುದಿಲ್ಲ.

4. **ತೆರಿಗೆ ಪರಿಗಣನೆ:**

(i) **ವರಮಾನ ತೆರಿಗೆ:** ಬಾಂಡುಗಳ ಮೇಲಿನ ಬಡ್ಡಿಯನ್ನು ವರಮಾನ ತೆರಿಗೆ ಅಧಿನಿಯಮ, 1961ರ ಅಡಿಯಲ್ಲಿ ವರಮಾನ ತೆರಿಗೆಯಿಂದ ವಿನಾಯಿತಿಗೊಳಿಸಲಾಗುವುದು.

(ii) **ಸಂಪತ್ತು ತೆರಿಗೆ:** ಬಾಂಡುಗಳನ್ನು ಸಂಪತ್ತು ತೆರಿಗೆ ಅಧಿನಿಯಮ, 1957ರ ಅಡಿಯಲ್ಲಿ ಸಂಪತ್ತು ತೆರಿಗೆಯಿಂದ ವಿನಾಯಿತಿಗೊಳಿಸಲಾಗುವುದು.

5. **ನೀಡಿಕೆ ಬೆಲೆ**

(i) ಬಾಂಡುಗಳನ್ನು ಮುಖಬೆಲೆಯಲ್ಲಿ ಅಂದರೆ ರೂ 100.00 ರಂತೆ ನೀಡಲಾಗುವುದು

(ii) ಬಾಂಡುಗಳನ್ನು ಕನಿಷ್ಠ ರೂ 1000/– ಮೊಬಲಗಿಗೆ (ಮುಖ ಬೆಲೆ) ಮತ್ತು ಅದರ ಗಣಕಗಳಲ್ಲಿ ನೀಡಲಾಗುವುದು. ಅದರಂತೆ, ನೀಡಿಕೆ ಬೆಲೆಯು ಪ್ರತಿ ರೂ 1000 ಕ್ಕೆ ರೂ 1000 (ನಾಮ ಮಾತ್ರ), ಆಗಿರುತ್ತದೆ.

6. **ವಂತಿಗೆ**

ಬಾಂಡುಗಳಿಗೆ ನೀಡುವ ವಂತಿಗೆಯು ನಗದು/ಡ್ರಾಫ್ಟ್‌ಗಳ/ಚೆಕ್‌ಗಳ ರೂಪದಲ್ಲಿರುತ್ತದೆ. ಚೆಕ್‌ಗಳನ್ನು ಅಥವಾ ಡ್ರಾಫ್ಟ್‌ಗಳನ್ನು ಕೆಳಗೆ ಪ್ಯಾರಾ 10 ರಲ್ಲಿ ನಿರ್ದಿಷ್ಟಪಡಿಸಿರುವಂತೆ ಸ್ವೀಕರಿಸುವ ಕಚೇರಿಯ ಹೆಸರಿನಲ್ಲಿ ಮತ್ತು ಅರ್ಜಿಗಳನ್ನು ಸಲ್ಲಿಸಿದ ಸ್ಥಳದಲ್ಲಿ ಸಂದಾಯವಾಗುವಂತೆ ತೆಗೆಯತಕ್ಕದ್ದು.

7. **ನೀಡಿಕೆ ದಿನಾಂಕ**

ಬಾಂಡ್ ಲೆಡ್ಜರ್ ಅಕೌಂಟ್ ರೂಪದಲ್ಲಿ ಬಾಂಡುಗಳ ನೀಡಿಕೆಯ ದಿನಾಂಕವನ್ನು ನಗದು ಸಂದಾಯ ಮಾಡಿದ ದಿನಾಂಕದಿಂದ ಅಥವಾ ಡ್ರಾಫ್ಟ್/ಚೆಕ್ ನಗದೀಕರಣಗೊಂಡ ದಿನಾಂಕದಿಂದ ತೆರೆಯಲಾಗುವುದು.

8. **ನಮೂನೆ**

ಬಾಂಡುಗಳನ್ನು ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ನೀಡಲಾಗುವುದು ಮತ್ತು ಅವುಗಳನ್ನು ಬಾಂಡ್ ಲೆಡ್ಜರ್ ಅಕೌಂಟ್ (ಬಿಎಲ್‌ಎ) ಎಂಬ ಖಾತೆಯಲ್ಲಿ ಧಾರಕನ ಲೆಕ್ಕದಲ್ಲಿ ಹೊಂದಿರತಕ್ಕದ್ದು.

ಬಾಂಡ್ ಲೆಡ್ಜರ್ ಅಕೌಂಟ್ ರೂಪದಲ್ಲಿರುವ ಬಾಂಡುಗಳನ್ನು ಕೆಳಗೆ 10ನೇ ಪ್ಯಾರಾದಲ್ಲಿ ನಿರ್ದಿಷ್ಟಪಡಿಸಿರುವಂತೆ ಬ್ಯಾಂಕುಗಳ ಮತ್ತು ಎಸ್‌ಹೆಚ್‌ಸಿಐಎಲ್ ನ ಎಷ್ಟೇ ಸಂಖ್ಯೆಯ ಶಾಖೆಗಳು ನೀಡುತ್ತವೆ ಮತ್ತು ಹೊಂದಿರುತ್ತವೆ. ಬಿಬಿಐ ನಮೂನೆಯಲ್ಲಿ ನಿರ್ದಿಷ್ಟಪಡಿಸಿರುವಂತೆ ಬಂಡವಾಳ ಪ್ರಮಾಣ ಪತ್ರವನ್ನು ಬಾಂಡ್ ಲೆಡ್ಜರ್ ಅಕೌಂಟ್‌ನಲ್ಲಿ ಬಾಂಡುಗಳ ಧಾರಕರಾಗಿರುವವರಿಗೆ ನೀಡಲಾಗುವುದು. (ಟಿಬಿಎಕ್ಸ್ ಅಥವಾ ಟಿಬಿವೈ ನಮೂನೆಯಲ್ಲಿ ಅನ್ವಯವಾಗುವಂತೆ)

9. **ಅರ್ಜಿಗಳು**

(i) ಬಾಂಡುಗಳಿಗೆ ಅರ್ಜಿಗಳನ್ನು ಟಿಬಿ–2 ಆಗಿ ಇದಕ್ಕೆ ಲಗತ್ತಿಸಿರುವ ನಮೂನೆ " ಎ" ನಲ್ಲಿ ಅಥವಾ ಅದಕ್ಕೆ ಬಹುಮಟ್ಟಿಗೆ ಹೋಲುವಂಥ ನಮೂನೆಯಲ್ಲಿ ಮೊಬಲಗು ಮತ್ತು ಅರ್ಜಿದಾರನ ಪೂರ್ಣ ಹೆಸರು ಮತ್ತು ವಿಳಾಸವನ್ನು ಸ್ಪಷ್ಟವಾಗಿ ತಿಳಿಸಿ ಸಲ್ಲಿಸತಕ್ಕದ್ದು.

(ii) ಅರ್ಜಿಯೊಂದಿಗೆ ಮೇಲಿನ ಪ್ಯಾರಾ 6ರಲ್ಲಿ ಸೂಚಿಸಿರುವಂತೆ ನಗದು/ಡ್ರಾಫ್ಟ್‌ಗಳು/ಚೆಕ್ಕುಗಳ ರೂಪದಲ್ಲಿ ಅಗತ್ಯ ಹಣ ಸಂದಾಯ ಮಾಡಿರುವ ದಾಖಲೆ ಇರತಕ್ಕದ್ದು.

(iii) ವರಮಾನ ತೆರಿಗೆ ಅಧಿನಿಯಮ, 1961ರ ಸಂಬಂಧಪಟ್ಟ ಉಪಬಂಧಗಳ ಅಡಿಯಲ್ಲಿ ತೆರಿಗೆಯಿಂದ ವಿನಾಯಿತಿ ಪಡೆದಿರುವಂಥ ಅರ್ಜಿದಾರರು ಅರ್ಜಿಯಲ್ಲಿ ನಮೂನೆ ಎ ಆ ಮಟ್ಟಿಗೆ ಒಂದು ಘೋಷಣೆಯನ್ನು ಮಾಡಿರಬೇಕು ಮತ್ತು ವರಮಾನ ತೆರಿಗೆ ಪ್ರಾದಿಕಾರಿಗಳಿಂದ ಪಡೆದ ಪ್ರಮಾಣಪತ್ರದ ಯಥಾ ಪ್ರತಿಯನ್ನು ಸಲ್ಲಿಸಬೇಕು.

**10. ಸ್ವೀಕರಿಸುವ ಅಧಿಕಾರಿ**

ಬಾಂಡ್ ಲೆಡ್ಜರ್ ಅಕೌಂಟ್ ರೂಪದಲ್ಲಿರುವ ಬಾಂಡುಗಳ ಅರ್ಜಿಗಳನ್ನು ಈ ಮುಂದಿನ ಕಡೆಗಳಲ್ಲಿ ಸ್ವೀಕರಿಸಲಾಗುವುದು:

(ಎ) ಟಿಬಿ 3ರಲ್ಲಿ ನಿರ್ದಿಷ್ಟಪಡಿಸಿರುವಂತೆ ಭಾರತೀಯ ಸ್ಟೇಟ್ ಬ್ಯಾಂಕ್‌ನ, ಸಹವರ್ತಿ ಬ್ಯಾಂಕುಗಳ, ರಾಷ್ಟ್ರೀಕೃತ ಬ್ಯಾಂಕುಗಳ ನಾಲ್ಕು ಖಾಸಗಿ ವಲಯ ಬ್ಯಾಂಕುಗಳ ಮತ್ತು ಎಸ್‌ಹೆಚ್‌ಸಿಐಎಲ್‌ನ ಎಷ್ಟೇ ಸಂಕ್ಯೆಯ ಶಾಖೆಗಳು.

(ಬಿ) ಭಾರತೀಯ ರಿಸರ್ವ್ ಬ್ಯಾಂಕು ಈ ಬಗ್ಗೆ ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ಬ್ಯಾಂಕು ಅಥವಾ ಬ್ಯಾಂಕುಗಳ ಮತ್ತು ಎಸ್‌ಹೆಚ್‌ಸಿಐಎಲ್ ಶಾಖೆಗಳು.

**11. ನಾಮ ನಿರ್ದೇಶನ**

(i) ಬಾಂಡ್‌ನ ಏಕೈಕ ಧಾರಕ ಅಥವಾ ಏಕೈಕ ಜೀವಂತ ಧಾರಕನು ಒಬ್ಬ ವ್ಯಕ್ತಿಯಾಗಿ ಆತ/ಆಕೆ ಮೃತಪಟ್ಟ ಸಂದರ್ಭದಲ್ಲಿ ಬಾಂಡ್‌ಗೆ ಮತ್ತು ಹಣ ಸಂದಾಯ ಪಡೆಯಲು ಹಕ್ಕುದಾರರಾದ ಒಬ್ಬ ಅಥವಾ ಹೆಚ್ಚು ಜನರನ್ನು ಈ ಅಧಿಸೂಚನೆ (ಟಿಬಿ–4) ಗಎ ಲಗತ್ತಿಸಿರುವ ನಮೂನೆ ಬಿ ಯಲ್ಲಿ ಅಥವಾ ಅದಕ್ಕೆ ಸಾಧ್ಯವಾದಷ್ಟು ಹೋಲಿಕೆಯಾಗುವ ನಮೂನೆಯಲ್ಲಿ ನಾಮ ನಿರ್ದೇಶನ ಮಾಡಬಹುದು.

(ii) ಇಬ್ಬರು ಅಥವಾ ಹೆಚ್ಚಿನ ನಾಮ ನಿರ್ದೇಶಿತರಿಗೆ ಯಾವುದೇ ಹಣ ಸಂದಾಯ ಮಾಡಬೇಕಾಗಿದ್ದು, ಹಾಗೆ ಹಣ ಸಂದಾಯ ಮಾಡುವುದಕ್ಕೆ ಮೊದಲೇ ಉಭಯತ್ರರೂ ಅಥವಾ ಅವರಲ್ಲಿ ಯಾರಾದರೂ ಮೃತಪಟ್ಟಲ್ಲಿ ಬಾಂಡ್‌ನ ಹಕ್ಕು ಜೀವಂತ ಇರುವ ನಾಮನಿರ್ದೇಶಿನರಲ್ಲಿ ಅಥವಾ ನಾಮ ನಿರ್ದೇಶಿತರಲ್ಲಿ ನಿಹಿತವಾಗಿರತಕ್ಕದ್ದು ಮತ್ತು ಅದರ ಮೇಲೆ ಬರಬೇಕಾಗಿರುವ ಹಣವನ್ನು ಅದರಂತೆ ಸಂದಾಯ ಮಾಡತಕ್ಕದ್ದು. ನಾಮನಿರ್ದೇಶಿತನು ಅಥವಾ ನಾಮ ನಿರ್ದೇಶಿತರು ಧಾರಕನಿಗೆ ಮೊದಲೇ ಮೃತಪಟ್ಟಲ್ಲಿ ಧಾರಕನು ಹೊಸ ನಾಮ ನಿರ್ದೇಶನ ಮಾಡಬಹುದು.

(iii) ಅಪ್ರಾಪ್ತ ವಯಸ್ಕನ ಹೆಸರಿನಲ್ಲಿ ನೀಡಲಾದ ಬಾಂಡುಗಳ ಸಂಬಂಧದಲ್ಲಿ ಯಾವುದೇ ನಾಮ ನಿರ್ದೇಶನವನ್ನು ಮಾಡತಕ್ಕದ್ದಲ್ಲ.

(iv) ಬಾಂಡ್‌ಧಾರಕನು ಮಾಡಿದ ನಾಮನಿರ್ದೇಶನವನ್ನು ನಮೂನೆ ಬಿ ಯಲ್ಲಿ ಅಥವಾ ಅದಕ್ಕೆ ಬಹುಮಟ್ಟಿಗೆ ಹೋಲುವಂಥ ನಮೂನೆಯಲ್ಲಿ ಹೊಸ ನಾಮ ನಿರ್ದೇಶನದ ಮೂಲಕ ಬದಲಾಯಿಸಬಹುದು ಅಥವಾ ಈ ಅಧಿಸೂಚನೆಗೆ (ಟಿಬಿ–5) ಲಗತ್ತಿಸಿರುವ ಸಿ ನಮೂನೆಯಲ್ಲಿ ಸ್ವೀಕರಿಸುವ ಕಚೇರಿಗೆ ಲಿಖಿತದಲ್ಲಿ ನೋಟೀಸು ನೀಡಿ ರದ್ದುಪಡಿಸಬಹುದು.

(v) ಪ್ರತಿಯೊಂದು ನಾಮ ನಿರ್ದೇಶನವನ್ನು ಮತ್ತು ಪ್ರತಿಯೊಂದು ರದ್ದಿಯಾತಿ ಅಥವಾ ಬದಲಾವಣೆಯನ್ನು ಬಾಂಡು ನೀಡಿರುವಂಥ ಕಚೇರಿಯಲ್ಲಿ ನೋಂದಾಯಿಸತಕ್ಕದ್ದು ಮತ್ತು ಅದು ಹಾಗೆ ನೋಂದಾಯಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(vi) ನಾಮ ನಿರ್ದೇಶಿತನು ಅಪ್ರಾಪ್ತ ವಯಸ್ಕನಾಗಿರುವಲ್ಲಿ, ಬಾಂಡ್‌ನ ಧಾರಕರು ನಾಮ ನಿರ್ದೇಶಿತನು ಅಪ್ರಾಪ್ತ ವಯಸ್ಕನಾಗಿರುವ ಅವಧಿಯಲ್ಲೇ ಮರಣ ಹೊಂದಿದ ಪಕ್ಷದಲ್ಲಿ ಬಾಂಡನ್ನು/ಬರಬೇಕಾದ ಹಣವನ್ನು ಪಡೆಯಲು ಯಾರೇ ವ್ಯಕ್ತಿಯನ್ನು ಆತ ನಾಮ ನಿರ್ದೇಶನ ಮಾಡಬಹುದು.

**12. ವರ್ಗಾವಣೀಯತೆ**

ಬಾಂಡ್ ಲೆಡ್ಜರ್ ಅಕೌಂಟ್ ರೂಪದಲ್ಲಿನ ಬಾಂಡುಗಳನ್ನು ವರ್ಗಾಯಿಸತಕ್ಕದ್ದಲ್ಲ.

**13. ಬಡ್ಡಿ**

ಬಾಂಡುಗಳಿಗೆ ವರ್ಷಕ್ಕೆ ಶೇ.8ರ ದರದಲ್ಲಿ ಬಡ್ಡಿ ದೊರೆಯುತ್ತದೆ. ಸಂಚಿತವಲ್ಲದ ಬಾಂಡುಗಳ ಮೇಲಿನ ಬಡ್ಡಿಯನ್ನು ಮೇಲಿನ ಪ್ಯಾರಾ 7ರ ಅನ್ವಯ ನೀಡಿದ ದಿನಾಂಕದಿಂದ ಅರ್ಧ ವಾರ್ಷಿಕ ಅಂತರಗಳಲ್ಲಿ ಸಂದಾಯ ಮಾಡಲಾಗುವುದು. ಸಂಚಿತ ಬಾಂಡುಗಳ ಮೇಲಿನ ಬಡ್ಡಿಯನ್ನು ವಂತಿಗೆದಾರ ಆಯ್ಕೆ ಮಾಡಿಕೊಳ್ಳುವಂತೆ ಅರ್ಧವಾರ್ಷಿಕ ಬಿಡುವುಗಳಲ್ಲಿ ಸಂಯೋಜಿಸಿ ಬಡ್ಡಿಯ ಜೊತೆಗೆ ಅವಧಿ ತುಂಬಿದ ಮೇಲೆ ಸಂದಾಯ ಮಾಡಲಾಗುವುದು. ಎರಡನೆಯ ಸಂದರ್ಭದಲ್ಲಿ ಬಾಂಡುಗಳ ವಾಯಿದೆ ತುಂಬುವಾಗಿನ ಮೌಲ್ಯ ಪ್ರತಿ 1000 ರೂಗಳಿಗೆ (ನಾಮ ಮಾತ್ರ) ರೂ. 1601 (ಅಸಲು ಮತ್ತು ಬಡ್ಡಿಯಾಗಿ) ಆಗಿರುತ್ತದೆ. ಸಂಚಿತವಲ್ಲದ ಬಾಂಡುಗಳಿಗೆ ಆಯ್ಕೆ ಮಾಡಿಕೊಂಡ ಧಾರಕರಿಗೆ ಬಡ್ಡಿಯನ್ನು, ಮೇಲಿನ ಪ್ಯಾರಾ 7ರ ಅನ್ವಯ ನೀಡಿದ ದಿನಾಂಕದಿಂದ ಸಂದರ್ಭಾನುಸಾರ ಸೆಪ್ಟೆಂಬರ್ 30ರವರೆಗೆ/ ಮಾರ್ಚ್ 31ರವರೆಗೆ ಮತ್ತು ಆ ತರುವಾಯ ಅಕ್ಟೋಬರ್ 1/ ಏಪ್ರಿಲ್ 1 ರಂದು ಅಂತ್ಯವಾದ ಅವದಿಗೆ ಅರ್ಧವರ್ಷಕ್ಕೊಮ್ಮೆ ಸಂದಾಯ ಮಾಡಲಾಗುವುದು. " ಬಾಂಡ್ಸ್ ಲೆಡ್ಜರ್ ಅಕೌಂಟ್" ರೂಪದಲ್ಲಿನ ಬಾಂಡುಗಳ ಮೇಲೆ ಬಡ್ಡಿಯನ್ನು ಹೂಡಿಕೆದಾರನು/ಧಾರಕನು ಮಾಡಿಕೊಂಡ ಆಯ್ಕೆಯಂತೆ ಚೆಕ್/ವಾರಂಟ್ ಮೂಲಕ ಅಥವಾ ಧಾರಕನ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಇಸಿಎಸ್ ಮುಖಾಂತರ ಸಂದಾಯ ಮಾಡಲಾಗುವುದು.

**14. ಮೂಲದಲ್ಲಿ ತೆರಿಗೆ ಕಟಾವಣೆ**

ಸಂಚಿತವಲ್ಲದ ಬಾಂಡುಗಳ ಮೇಲೆ ಕಾಲಕಾಲಕ್ಕೆ ಬಡ್ಡಿ ಸಂದಾಯ ಮಾಡುವಾಗ ತೆರಿಗೆಯನ್ನು ಮೂಲದಲ್ಲೇ ಕಟಾವಣೆ ಮಾಡಿ ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಲಾಗುವುದು.

ವಾಯಿದೆ ತುಂಬಿದಾಗಿನ ಮೌಲ್ಯದ ಬಡ್ಡಿಯ ಭಾಗದ ಮೇಲೆ ತೆರಿಗೆಯನ್ನು ಸಂಚಿತ ಬಾಂಡುಗಳ ಮೇಲೆ ವಾಯಿದೆ ತುಂಬಿದಾಗಿನ ಹುಟ್ಟುವಳಿಯನ್ನು ಸಂದಾಯ ಮಾಡುವ ಸಮಯದಲ್ಲಿ ಮೂಲದಲ್ಲೇ ಕಟಾವಣೆ ಮಾಡಿ ಸರ್ಕಾರಿ ಲೆಕ್ಕಕ್ಕೆ ಜಮೆ ಮಾಡಲಾಗುವುದು.

ಆದರೆ, ವರಮಾನ ತೆರಿಗೆ ಅಧಿನಿಯಮದ ಸಂಬಂಧಪಟ್ಟ ಉಪಬಂಧಗಳ ಅಡಿಯಲ್ಲಿ ತೆರಿಗೆ ಸಂದಾಯದಿಂದ ವಿನಾಯಿತಿ ಪಡೆದಿರುವುದಾಗಿ ಅರ್ಜಿ ನಮೂನೆಯಲ್ಲಿ ಘೋಷಿಸಿರುವಂಥ ಮತ್ತು ವರಮಾನ ತೆರಿಗೆ ಪ್ರಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರದ ಯಥಾ ಪ್ರತಿಯನ್ನು ಸಲ್ಲಿಸಿರುವಂಥ ಸಂಸ್ಥೆಗಳಿಗೆ ಸಂದರ್ಭಾನುಸಾರ ಬಡ್ಡಿ ಸಂದಾಯ ಮಾಡುವಾಗ/ ವಾಯಿದೆ ತುಂಬಿದಾಗಿನ ಹುಟ್ಟುವಳಿಯನ್ನು ಸಂದಾಯ ಮಾಡುವಾಗ ತೆರಿಗೆಯನ್ನು ಕಟಾವಣೆ ಮಾಡಲಾಗುವುದಿಲ್ಲ.

**15. ಬಾಂಡುಗಳ ಮೇಲೆ ಮುಂಗಡಗಳು/ ವ್ಯಾಪಾರಾರ್ಹತೆ**

ಬಾಂಡುಗಳನ್ನು ದ್ವಿತೀಯ ಹಂತದ ಮಾರುಕಟ್ಟೆಯಲ್ಲಿ ಮಾರಾಟ ಮಾಡತಕ್ಕದ್ದಲ್ಲ ಮತ್ತು ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕಿಂಗೇತರ ಹಣಕಾಸು ಕಂಪನಿಗಳು (ಎನ್‌ಬಿಎಫ್‌ಸಿ) ಮುಂತಾದವು ನೀಡುವ ಸಾಲಗಳಿಗೆ ಅಧಿಕ ಭದ್ರತೆಯಾಗಿ ನೀಡಲು ಈ ಬಾಂಡುಗಳು ಅರ್ಹವಾಗಿರತಕ್ಕದ್ದಲ್ಲ.

**16.** **ಮರು ಸಂದಾಯ**

ಬಾಂಡುಗಳಲ್ಲಿ ಹೂಡಿದ ಹಣವನ್ನು ಬಾಂಡುಗಳನ್ನು ನೀಡಿದ ದಿನಾಂಕದಿಂದ 6 (ಆರು) ವರ್ಷಗಳು ಮುಕ್ತಾಯಗೊಂಡ ನಂತರ ಮರು ಸಂದಾಯ ಮಾಡತಕ್ಕದ್ದು.

(ii) ದಳ್ಳಾಳಿ ರುಸುಮು ಮತ್ತು ಕಮೀಷನ್ನನ್ನು ಸಿಎಎಸ್, ನಗಪುರ ಇದು ಮಾಸಿಕ ಆಧಾರದ ಮೇಲೆ ಸಂದಾಯ ಮಾಡುತ್ತದೆ.

(iii) ನಿರ್ವಹಣಾ ಮತ್ತು ಸೇವಾ ವೆಚ್ಚಗಳನ್ನು ಅಧಿಕಾರ ವ್ಯಾಪ್ತಿ ಹೊಂದಿರುವ ಪಿಡಿಒ ಸಂದಾಯ ಮಾಡುತ್ತದೆ.

**17.** **ದಳ್ಳಾಳಿ ರುಸುಮ ಮತ್ತು ನಿರ್ವಹಣಾ ವೆಚ್ಚಗಳು**

ಮೇಲಿನ ಪ್ಯಾರಾ 10 (ಎ) ಮತ್ತು (ಬಿ) ಯಲ್ಲಿ ಪಟ್ಟಿ ಮಾಡಿರುವ ಸ್ವೀಕರಿಸುವ ಕಚೇರಿಗಳಲ್ಲಿ ನೋಂದಾಯಿಸಿಕೊಂಡಿರುವ ಪಿಪಿಎಫ್ ಮತ್ತು ಯುಟಿಐ ಏಜೆಂಟರುಗಳು ಸೇರಿದಂತೆ ದಳ್ಳಾಳಿಗಳಿಗೆ ಮತ್ತು ತಮ್ಮ ಕಕ್ಷಿದಾರನ ಪರವಾಗಿ ಅವರು ಸಲ್ಲಿಸಿದ ಹಾಗೂ ಅವರ ಮೊಹರು ಹಾಕಿರುವಂತಹ ಅರ್ಜಿಗಳ ಮೇಲೆ ಅಧಿಕೃತಗೊಳಿಸಲಾದ ಬ್ಯಾಂಕುಗಳಿಗೂ ಕೂಡ ಪ್ರತಿ 100 ರೂಪಾಯಿಗೆ 1.00 ರೂಪಾಯಿ (ಒಂದು ರೂಪಾಯಿ ಮಾತ್ರ) ಯಂತೆ ದಳ್ಳಾಳಿ ರುಸುಮು ಸಂದಾಯ ಮಾಡಲಾಗುವುದು.

ಭಾರತದ ರಾಷ್ಟ್ರಪತಿಯವರ ಆದೇಶಾನುಸಾರ
ಸಹಿ/–
(ಡಿ. ಸ್ವರೂಪ)
ಅಪರ ಕಾರ್ಯದರ್ಶಿ (ಆಯವ್ಯಯ)